ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 25
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
ಉತ್ತರಿಸುವ ಸಚಿವರು : ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-07-2018

ಕ್ರಸಂ	ಪ್ರಶ್ನೆ	ಉತ್ತರ
ಅ	ಮಂಗಳೂರು, ಉಡುಪಿ, ಮಣಿಪಾಲ ಮತ್ತು ಕುಂದಾಪುರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹವಾ ನಿಯಂತ್ರಿತ ಬಸ್ಸುಗಳ ಆದಾಯ ಲಾಭಕರವಾಗಿದೆಯೇ; ಎಷ್ಟು ಬಸ್ಸು ಪ್ರಾರಂಭಿಸಲಾಗಿದೆ. ಪ್ರಸ್ತುತ ಎಷ್ಟು ಬಸ್ಸು ಕಾರ್ಯನಿರ್ವಹಿಸುತ್ತಿದೆ (ವಿವರ ನೀಡುವುದು);	• ಮಂಗಳೂರು ವಿಭಾಗದ ವತಿಯಿಂದ ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್ ಪ್ರದೇಶದಿಂದ ಉಡುಪಿ ಮಾರ್ಗ ಮಣಿಪಾಲಕ್ಕೆ ಹಾಗೂ ಇದೇ ಮಾರ್ಗವಾಗಿ ಹಿಂದಕ್ಕೆ ಪ್ರಸ್ತುತ ಒಟ್ಟು 10 ಹವಾನಿಯಂತ್ರಿತ ವೋಲ್ವೋ ನಗರ ಸಾರಿಗೆ ಬಸ್ಸುಗಳನ್ನು (ಅನುಸೂಚಿಗಳು) ಕಾರ್ಯಾಚರಿಸಲಾಗುತ್ತಿದೆ. • ಇವುಗಳು ಸ್ಟೇಟ್‌ಬ್ಯಾಂಕ್‌ನಿಂದ ಮಣಿಪಾಲಕ್ಕೆ ಬೆಳಿಗ್ಗೆ 7.00 ರಿಂದ ಸಂಜೆ 7.00ರ ವರೆಗೆ ಸರಾಸರಿ ಪ್ರತಿ 30 ನಿಮಿಷಕ್ಕೊಂದರಂತೆ ಒಟ್ಟು 25 ಸಿಂಗಲ್ ಟ್ರಿಪ್ಸ್‌ಗಳ ಹಾಗೂ ಮಣಿಪಾಲದಿಂದ ಮಂಗಳೂರಿನ ಸ್ಟೇಟ್‌ಬ್ಯಾಂಕ್‌ವರೆಗೆ ಬೆಳಿಗ್ಗೆ 7.15 ರಿಂದ ಸಂಜೆ 7.15ರ ವರೆಗೆ ಪ್ರತಿ 30 ನಿಮಿಷಕ್ಕೊಂದರಂತೆ ಒಟ್ಟು 25 ಸಿಂಗಲ್ ಟ್ರಿಪ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. • ಮಂಗಳೂರು-ಉಡುಪಿ-ಕುಂದಾಪುರ-ಭಟ್ಕಳ ಮಾರ್ಗದಲ್ಲಿ 8 ಹವಾನಿಯಂತ್ರಿತ ವೋಲ್ವೋ ಬಸ್ಸುಗಳಿಂದ (ಅನುಸೂಚಿಗಳು) ಒಟ್ಟಾರೆ 24 ಸಿಂಗಲ್ ಟ್ರಿಪ್ಸ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. • ಮಂಗಳೂರು – ಬೆಂಗಳೂರು – ಉಡುಪಿ – ಮಣಿಪಾಲ ಮಾರ್ಗದಲ್ಲಿ ಪ್ರಸ್ತುತ 4 ಮಲ್ಟಿ ಆಕ್ಸೆಲ್ ವೋಲ್ವೋ (ಹವಾನಿಯಂತ್ರಿತ) ಬಸ್ಸುಗಳನ್ನು ಕಾರ್ಯಾಚರಿಸಲಾಗುತ್ತಿದ್ದು, ಇವುಗಳಿಂದ 4 ಸಿಂಗಲ್ ಟ್ರಿಪ್ಸ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. • ಮಂಗಳೂರು-ಬೆಂಗಳೂರು-ಮಂಗಳೂರು ನಡುವೆ 4 ಮಲ್ಟಿ ಅಕ್ಸೆಲ್ ವೋಲ್ವೋ (ಹವಾನಿಯಂತ್ರಿತ) ಬಸ್ಸುಗಳನ್ನು ಕಾರ್ಯಾಚರಿಸಲಾಗುತ್ತಿದ್ದು, ಇವುಗಳಿಂದ 4 ಸಿಂಗಲ್ ಟ್ರಿಪ್ಸ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. • ಕುಂದಾಪುರದಿಂದ ಹಾಸನ ಮಾರ್ಗವಾಗಿ ಬೆಂಗಳೂರಿಗೆ ಹಾಗೂ ಇದೇ ಮಾರ್ಗವಾಗಿ ಹಿಂದಕ್ಕೆ ಪ್ರಸ್ತುತ ಒಟ್ಟು 6 ಹವಾನಿಯಂತ್ರಿತ ಸ್ಲೀಪರ್ ಸಾರಿಗೆಗಳನ್ನು ಕಾರ್ಯಾಚರಿಸುತ್ತಿದ್ದು, ಇವುಗಳಿಂದ 6 ಸಿಂಗಲ್ ಟ್ರಿಪ್ಸ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

		• ಮೇಲ್ಕಂಡ ಈ ಎಲ್ಲಾ ಸಾರಿಗೆಗಳ ಸದುಪಯೋಗವನ್ನು ಮಂಗಳೂರು, ಉಡುಪಿ, ಮಣಿಪಾಲ ಮತ್ತು ಕುಂದಾಪುರ ಭಾಗದ ಸಾರ್ವಜನಿಕ ಪ್ರಯಾಣಿಕರು ಪಡೆದುಕೊಳ್ಳುತ್ತಿದ್ದಾರೆ. • ಈ ಮೇಲೆ ತಿಳಿಸಲಾಗಿರುವ ಸಾರಿಗೆಗಳ ಪೈಕಿ ಬಹುತೇಕ ಸಾರಿಗೆಗಳ ಪ್ರತಿ ಕಿ.ಮೀ ಆದಾಯವು ಕಾರ್ಯಾಚರಣೆ ವೆಚ್ಚಕ್ಕಿಂತ ಕಡಿಮೆ ಬರುತ್ತಿದ್ದು ನಷ್ಟವನ್ನು ಅನುಭವಿಸುತ್ತಿವೆ. ಆದಾಗ್ಯೂ, ಸಾರ್ವಜನಿಕ ಪ್ರಯಾಣಿಕರ ಹಿತದೃಷ್ಟಿಯಿಂದ ಸದರಿ ಸಾರಿಗೆಗಳನ್ನು ಮುಂದುವರೆಸಲಾಗುತ್ತಿದೆ.
ಆ	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನರ್ಮ್ ಯೋಜನೆ ಅನ್ವಯ ನಗರ ಸಾರಿಗೆ ಬಸ್ಸುಗಳನ್ನು ಪ್ರಾರಂಭಿಸದೇ ಇರಲು ಕಾರಣಗಳೇನು; (ವಿವರ ನೀಡುವುದು)	• ಮಂಗಳೂರು ನಗರದಲ್ಲಿ ನರ್ಮ್ ಯೋಜನೆಯನ್ವಯ ಒಟ್ಟು 35 ಬಸ್ಸುಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿತ್ತು. ಆದರಂತೆ, ಈ ಎಲ್ಲಾ 35 ವಾಹನಗಳಿಗೆ ಪರವಾನಗಿ ಮಂಜೂರಾತಿಯಾಗಿರುತ್ತದೆ. • ಇವುಗಳ ಪೈಕಿ 14 ಪರವಾನಿಗೆಗಳಿಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇಲ್ಲಿ ವೇಳಾ ಪಟ್ಟಿ ನಿಗದಿಯಾಗಿರುವುದಿಲ್ಲ. ಹಾಗೆಯೇ, ಇವುಗಳಿಗೆ ಸಂಬಂಧಿಸಿದಂತೆ ಮಂಜೂರಾತಿಯಾಗಿದ್ದ ಪರವಾನಗಿಗಳ ವಿರುದ್ಧ ಮಂಗಳೂರು ಭಾಗದ ಖಾಸಗಿ ಪ್ರವರ್ತಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಈ ಹಿನ್ನೆಲೆಯಲ್ಲಿ, ಇವುಗಳನ್ನು ಬಳಸಿಕೊಂಡು ಮಂಗಳೂರು ನಗರದಲ್ಲಿ ನಗರ ಸಾರಿಗೆ ಸೌಲಭ್ಯವನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. • ಉಳಿದಂತೆ, 21 ಬಸ್ಸುಗಳಿಗೆ ಪೂರಕವಾಗಿ ಮಂಜೂರಾತಿಯಾಗಿರುವ ಪರವಾನಗಿ ಅನ್ವಯ, ಪ್ರಸ್ತುತ ಮಂಗಳೂರು ನಗರದಲ್ಲಿ ನರ್ಮ್ ಯೋಜನೆಯನ್ವಯ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.
ಇ	ಮಂಗಳೂರು ನಗರದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸು ನಿಲ್ದಾಣಗಳಿಗೆ ಸ್ಥಳಾವಕಾಶದ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸ್ಥಳಾವಕಾಶದ ನಿವಾರಣೆಗೆ ಇಲಾಖೆಯ ಮುಂದೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ:	ಮಂಗಳೂರಿನಲ್ಲಿ ನಿಗಮದ ಬಸ್ ನಿಲ್ದಾಣವನ್ನು 4.00 ಎಕರೆ ಪ್ರದೇಶದಲ್ಲಿ ನಿರ್ಮಿಸಿ, ವಾಹನಗಳ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಬಸ್ ನಿಲ್ದಾಣದಲ್ಲಿ ನಗರ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಸ್ಥಳಾವಕಾಶದ ಕೊರತೆಯಿರುವುದರಿಂದ ಹೆಚ್ಚುವರಿ ಸ್ಥಳಾವಕಾಶಕ್ಕೆ ಹಾಲಿ ಬಸ್ ನಿಲ್ದಾಣದ ಮುಂಭಾಗದಲ್ಲಿ ಖಾಲಿ ಇರುವ ಕೊಡಿಯಾಲ್‌ಬೈಲ್ ಗ್ರಾಮದ ಸರ್ವೆ ಸಂಖ್ಯೆ:1557/3ಪಿ2 ರಲ್ಲಿರುವ 0.23 ಎಕರೆ ನಿವೇಶನವನ್ನು ನಗರ ಸಾರಿಗೆ ಬಸ್ ನಿಲ್ದಾಣ ನಿರ್ಮಿಸಲು ಕರಾರಸಾ ನಿಗಮಕ್ಕೆ ಸರ್ಕಾರದಿಂದ ಉಚಿತವಾಗಿ ಮಂಜೂರು ಮಾಡುವಂತೆ ಕೋರಲಾಗಿದೆ.

		ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ 7.23 ಎಕರೆ ಜಮೀನಿನಲ್ಲಿ ಮಹಾನಗರ ಪಾಲಿಕೆ ವತಿಯಿಂದ Transport Hub ನಿರ್ಮಿಸುವ ಪ್ರಸ್ತಾವನೆ ಅಂತಿಮ ಹಂತದಲ್ಲಿದ್ದು, ಸದರಿ ಬಸ್ ನಿಲ್ದಾಣದಲ್ಲಿ ಕರಾರಸಾ ನಿಗಮದ ಬಸ್ ನಿಲುಗಡೆಗಾಗಿ ಸ್ಥಳಾವಕಾಸ ಗುರುತಿಸಲಾಗಿರುತ್ತದೆ ಹಾಗೂ ಸದರಿ Transport Hub ನಲ್ಲಿ ನಿಗಮದ ಬಸ್ ನಿಲುಗಡೆಗಾಗಿ ಮಂಗಳೂರು ಮಹಾನಗರ ಪಾಲಿಕೆಯವರೊಂದಿಗೆ ಸಹಯೋಗದೊಂದಿಗೆ ಚರ್ಚಿಸಿಕೊಂಡು ಸ್ಥಳ ನಿಗದಿ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.
ಈ	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಾಂಟ್ರೇಕ್ಟ್ ಬಸ್ಸುಗಳಿಗೆ ಪರವಾನಿಗೆ ನೀಡಲಾಗಿದೆ: ಯಾವ ವರ್ಷದಲ್ಲಿ ಪರವಾನಿಗೆ ನೀಡಲಾಗಿದೆ: ಯಾವ ಉದ್ದೇಶಕ್ಕಾಗಿ ನೀಡಲಾಗಿದೆ: ಪ್ರಸ್ತುತ ಎಷ್ಟು ಬಸ್ಸುಗಳು ಕಾರ್ಯ ನಿರ್ವಹಿಸುತ್ತಿವೆ: ಇದರಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು? (ವಿವರ ನೀಡುವುದು)	ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 74ರ ಪ್ರಕಾರ 2003ನೇ ಸಾಲಿನಿಂದ ಇಂದಿನವರೆಗೆ ಕರ್ನಾಟಕ ರಾಜ್ಯಾದ್ಯಂತ ಸಂಚರಿಸಲು 3099 ವಾಹನಗಳಿಗೆ ಕಾಂಟ್ರಾಕ್ಟ್ ಕ್ಯಾರೇಜ್ ರಹದಾರಿಗಳನ್ನು ನೀಡಲಾಗಿದೆ. ಇವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ 186 ವಾಹನಗಳಿಗೆ ಕಾಂಟ್ರಾಕ್ಟ್ ಕ್ಯಾರೇಜ್ ರಹದಾರಿಗಳನ್ನು ನೀಡಲಾಗಿದೆ. ಸದರಿ ವಾಹನಗಳಿಗೆ ಒಪ್ಪಂದದ ಆಧಾರದ ಮೇಲೆ ಸಾರ್ವಜನಿಕ ಪ್ರಯಾಣಿಕರನ್ನು ಕೊಂಡೊಯ್ಯುವ ಉದ್ದೇಶಕ್ಕಾಗಿ ರಹದಾರಿಗಳನ್ನು ನೀಡಲಾಗಿದೆ. ಈ ವಾಹನಗಳಿಂದ ಸರ್ಕಾರಕ್ಕೆ ವಾರ್ಷಿಕ ರೂ.111,84,80,400/- (ನೂರ ಹನ್ನೊಂದು ಕೋಟಿ ಎಂಭತ್ತನಾಲ್ಕು ಲಕ್ಷದ ಎಂಭತ್ತು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ) ಗಳಷ್ಟು ಆದಾಯ ಬರುತ್ತಿದೆ.

ಸಂ: ಸಾರಿಇ 76 ಸಾಸಂಪ್ರ 2018

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು